

# ಬೃಂದಾವಿಹಾರಿ ಗಣೇಶ್

2024ರಲ್ಲಿ ತೆರೆಕಂಡಿದ್ದ ‘ಕೃಷ್ಣಂ ಪ್ರಣಯ ಸಖಿ’ ಸಿನಿಮಾ ನಂತರ ನಟ ಗಣೇಶ್ ಮತ್ತು ನಿರ್ದೇಶಕ ಶ್ರೀನಿವಾಸರಾಜು ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಬಹುನಿರೀಕ್ಷಿತ ಸಿನಿಮಾಗೆ ಈಚೆಗೆ ‘ಬೃಂದಾವಿಹಾರಿ’ ಎಂದು ಶೀರ್ಷಿಕೆ ಅನಾವರಣಗೊಳಿಸಲಾಗಿದೆ. ಶೀಘ್ರದಲ್ಲೇ ಈ ಸಿನಿಮಾವನ್ನು ತೆರೆಗೆ ತರುವ ಸಿದ್ಧತೆಗಳು ನಡೆಯುತ್ತಿವೆ.

ಈ ನಡುವೆ ಸಿನಿಮಾದ ಕೆಲವು ಸಂಗತಿಗಳನ್ನು ಹಂಚಿಕೊಂಡಿರುವ ನಿರ್ದೇಶಕ ಶ್ರೀನಿವಾಸರಾಜು, “ಬೃಂದಾವಿಹಾರಿ ಎಂಬುದು ಪಾಸಿಟಿವ್ ಹೆಸರು ಎನಿಸಿತು. ಇದು ರೊಮ್ಯಾಂಟಿಕ್ ಜಾನರ್ ಚಿತ್ರ. ಪ್ರೇಮಕಥೆ ಎಂದ ಮಾತ್ರಕ್ಕೆ ಹಳೆಯದೇ ಧಾಟಿಯಲ್ಲಿ ಹೋಗಬೇಕಿಲ್ಲ. ಹೊಸ ಟೆಂಪ್ಲೇಟ್‌ನಲ್ಲಿ ಸಿನಿಮಾ ರೂಪಿತಗೊಂಡಿದೆ. ‘ಕೃಷ್ಣಂ ಪ್ರಣಯ ಸಖಿ’ ಸಿನಿಮಾದ ಯಾವುದೇ ಅಂಶಗಳು ಕಥೆಯಲ್ಲಾಗಲೀ ನಿರೂಪಣೆಯಲ್ಲಾಗಲೀ ಮರುಕಳಿಸಿಲ್ಲ” ಎಂದು ವಿವರಿಸಿದ್ದಾರೆ.

ಜೊತೆಗೆ ನಟ ಗಣೇಶ್ ಅವರನ್ನು ಈ ಸಿನಿಮಾ ವಿಶೇಷ ರೂಪದಲ್ಲಿ, ಹೊಸ ಬೆಳಕಿನಲ್ಲಿ ಪ್ರಸ್ತುತಪಡಿಸುವುದಾಗಿಯೂ ತಿಳಿಸಿದ್ದಾರೆ. ‘ಗಣೇಶ್ ಅವರ ವೃತ್ತಿಜೀವನದಲ್ಲಿ ಈ ಸಿನಿಮಾ ಎಲ್ಲಾ ರೀತಿಯಲ್ಲಿಯೂ ಅಗ್ರಸ್ಥಾನದಲ್ಲಿ ನಿಲ್ಲಲಿದೆ’ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಜೂನ್‌ನಲ್ಲಿ ಬಿಡುಗಡೆ ಮಾಡುವ ಯೋಜನೆಯಿದೆ. ದೇವಿಕಾ ಭಟ್ ಹಾಗೂ ಮಾಳವಿಕ ಶರ್ಮ ಇಬ್ಬರು ನಾಯಕಿಯರು ಸಿನಿಮಾದಲ್ಲಿದ್ದು, ಶ್ರೀನಿವಾಸರಾಜು ಅವರೇ ಕಥೆ ಹಾಗೂ ಚಿತ್ರಕಥೆ ಬರೆದಿದ್ದಾರೆ. ಸಮೃದ್ಧಿ ವಿ. ಮಂಜುನಾಥ್ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಈಚೆಗೆ ಗಣೇಶ್ ಅಭಿನಯದ ‘ತಮ್ಮ ಸುಖಾಗಮನ ಬಯಸುವ’ ಸಿನಿಮಾ ಕೂಡ ಘೋಷಣೆಯಾಗಿದ್ದು, ಹಲವು ಪ್ರಾಜೆಕ್ಟ್‌ಗಳಲ್ಲಿ ಅವರು ತೊಡಗಿದ್ದಾರೆ.

# ಸಜ್ಜಾಗುತ್ತಿದೆ ಕರಾವಳಿ ಸೊಗಡಿನ ಮತ್ತೊಂದು ಕಾಮಿಡಿ ಸಿನಿಮಾ

‘ಸು ಫ್ರಂ ಸೋ’ ಸಿನಿಮಾ ನಂತರ ಇದೀಗ ಕರಾವಳಿ ಮೂಲದ ಮತ್ತೊಂದು ಮನರಂಜನಾ ಚಿತ್ರ ತೆರೆಗೆ ಬರಲು ಸಜ್ಜಾಗುತ್ತಿದೆ. ‘ಮ್ಯಾರೇಜ್ ಪಾರ್ಟಿ’ ಎಂದು ಈ ಸಿನಿಮಾಗೆ ಶೀರ್ಷಿಕೆ ಇಡಲಾಗಿದ್ದು, ನಿರ್ದೇಶಕ ಚಯನ್ ಶೆಟ್ಟಿ ಗ್ರಾಮವೊಂದರಲ್ಲಿನ ಮದುವೆ ಕಥೆಯನ್ನಿಟ್ಟುಕೊಂಡು ಈ ಕಥೆ ಹೆಣೆದಿದ್ದಾರೆ.

ರೂಪೇಶ್ ಶೆಟ್ಟಿ ಅಭಿನಯದ ‘ಅಧಿಪತ್ರ’ ಸಿನಿಮಾ ಮೂಲಕ ಗಮನಸೆಳೆದಿದ್ದ ಚಯನ್, ಕಾಮಿಡಿ ಸಿನಿಮಾದತ್ತ ಚಿತ್ತ ನೆಟ್ಟಿದ್ದಾರೆ. ಮೊದಲ ಹಂತದ ಚಿತ್ರೀಕರಣ ಮುಗಿದಿದ್ದು, ಕುಂದಾಪುರ ಹಾಗೂ ಸುತ್ತಮುತ್ತ ಚಿತ್ರೀಕರಣ ನಡೆದಿದೆ. ಸಿನಿಮಾದ ನಿರೂಪಣೆಯಲ್ಲಿ ಹಾಸ್ಯ ತುಂಬಿರುವುದಾಗಿ ಚಿತ್ರತಂಡ ಹೇಳಿಕೊಂಡಿದೆ.

ತುಳು ಸಿನಿಮಾಗಳಲ್ಲಿ ಅಭಿನಯಿಸಿದ್ದ ವಿನೀತ್ ಕುಮಾರ್ ಈ ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿರಲಿದ್ದಾರೆ. ‘ಕಾಂತಾರ’, ‘ಸು ಫ್ರಂ ಸೋ’ ಸಿನಿಮಾದಲ್ಲಿದ್ದ ಪ್ರಕಾಶ್ ತುಮಿನಾಡ್, ದೀಪಕ್ ರೈ, ರಾಮ್‌ದಾಸ್, ಪುಷ್ಪರಾಜ್ ಬೋಳಾರ್ ಪಾತ್ರಬಳಗದಲ್ಲಿದ್ದಾರೆ. ನವೀನ್ ಡಿ ಪಡಿಲ್ ಕೂಡ ಪ್ರಮುಖ ಪಾತ್ರ ವಹಿಸಿದ್ದಾರೆ. ರಕ್ಷಿತಾ, ನಮಿತಾ ಕಿರಣ್ ಹಾಗೂ ರಘು ಪಾಂಡೇಶ್ವರ ನಟಿಸಿದ್ದು, ಕನ್ನಡ–ಮಲಯಾಳಂ ಎರಡೂ ಭಾಷೆಗಳಲ್ಲಿ ಏಕಕಾಲದಲ್ಲಿ ಸಿನಿಮಾ ನಿರ್ಮಾಣಗೊಳ್ಳಲಿದೆ.

# ಹೊಸ ಧಾಟಿಯಲ್ಲಿ ರಾಗಿಣಿ

‘ಈ ಸಿನಿಮಾ ನನ್ನ ವೃತ್ತಿಜೀವನಕ್ಕೊಂದು ವಿಶಿಷ್ಟ ಸೇರ್ಪಡೆಯಾಗಲಿದೆ. ಇದು ನನ್ನ ಪಾಲಿಗೆ ಬಹಳ ವಿಭಿನ್ನ ಸಿನಿಮಾ. ಆ್ಯಕ್ಷನ್, ಹಾರರ್ ಜೊತೆಗೆ ಭಾವನಾತ್ಮಕ ಎಳೆಯನ್ನು ಒಳಗೊಂಡಿದೆ. ಎಲ್ಲ ರೀತಿಯ ಪ್ರೇಕ್ಷಕರಿಗೂ ತಮಗೆ ಕನೆಕ್ಟ್ ಆಗುವಂಥ ಅಂಶಗಳು ಈ ಸಿನಿಮಾದಲ್ಲಿವೆ’ ಎಂದು ತಮ್ಮ ಹೊಸ ಸಿನಿಮಾದ ಕುರಿತು ಹೇಳಿಕೊಂಡಿದ್ದಾರೆ ನಟಿ ರಾಗಿಣಿ ದ್ವಿವೇದಿ.

‘ಪೊಲೀಸ್ ಕಂಪ್ಲೇಂಟ್’ ಸಿನಿಮಾದಲ್ಲಿ ಸದ್ಯ ನಟಿ ರಾಗಿಣಿ ನಟಿಸುತ್ತಿದ್ದು, ಸಂಜೀವ್ ಮೆಗೊಟಿ ಈ ಸಿನಿಮಾ ಮೂಲಕ ದಶಕದ ನಂತರ ಕನ್ನಡ ಸಿನಿಮಾಗೆ ಮರಳಿದ್ದಾರೆ. ವರಲಕ್ಷ್ಮಿ ಶರತ್ ಕುಮಾರ್ ಕೂಡ ಸಿನಿಮಾದ ಪ್ರಮುಖ ಭಾಗವಾಗಿದ್ದಾರೆ.

‘ಸುಮಾರು ಹತ್ತು ವರ್ಷಗಳ ನಂತರ ಕನ್ನಡ ಸಿನಿಮಾರಂಗಕ್ಕೆ ಮರಳುತ್ತಿರುವುದಕ್ಕೆ ಖುಷಿಯಿದೆ. ಆ್ಯಕ್ಷನ್, ಹಾರರ್, ಥ್ರಿಲ್ಲರ್ ಸಿನಿಮಾದೊಂದಿಗೆ ಕನ್ನಡಕ್ಕೆ ಬಂದಿದ್ದೇನೆ. ಕನ್ನಡ ಹಾಗೂ ತೆಲುಗು ಎರಡೂ ಭಾಷೆಯಲ್ಲಿ ಏಕಕಾಲಕ್ಕೆ ಚಿತ್ರೀಕರಣ ನಡೆಸಲಾಗುತ್ತಿದೆ. ಉತ್ತಮ ಸಿನಿಮಾವನ್ನು ಕನ್ನಡ ಸಿನಿಮಾಭಿಮಾನಿಗಳಿಗೆ ನೀಡುತ್ತೇವೆ’ ಎಂದಿದ್ದಾರೆ ಸಂಜೀವ್.

ಸದ್ಯ, ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದಿದ್ದು, ಮೇ ತಿಂಗಳಿನಲ್ಲಿ ಬಿಡುಗಡೆ ಮಾಡುವ ಯೋಜನೆಯಿರುವುದಾಗಿ ಸಿನಿಮಾ ತಂಡ ಹೇಳಿಕೊಂಡಿದೆ. ಆ್ಯಕ್ಷನ್, ಸಸ್ಪೆನ್ಸ್, ಭಾವನಾತ್ಮಕತೆ– ಇವೆಲ್ಲದರ ನಡುವೆ ರಾಗಿಣಿ ಅವರನ್ನು ಪ್ರಮುಖ ಪಾತ್ರದಲ್ಲಿರಿಸಲಾಗಿದೆ.

